ದಿನಾಂಕಃ 17.03.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ಮಾಡಿಸಲಾಯಿತು

ಮುಖ್ಯ ವಿಚಾರಣೆಃ ಅರ್ಜಿದಾರರ ಪರ ವಕೀಲರಿಂದಃ

ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯವಾಗಿದೆ ಎಂದು ಪ್ರಮಾಣೀಕರಿಸುತ್ತೇನೆ.

ಈ ಕೆಳಕಂಡ ದಾಖಲೆಯನ್ನು ಹಾಜರುಪಡಿಸುತ್ತಿದ್ದೇನೆ.

| | |
|---|---|
| ನಿ.ಪಿ.21 | ಅಧಿಕಾರ ಪತ್ರ |
| ನಿ.ಪಿ.22 | ದೃಡೀಕೃತ ಪೋಲೀಸ್ ಇಂಟಮೇಷನ್ |
| ನಿ.ಪಿ.23 | ದೃಡೀಕೃತ ಎಂ.ಎಲ್.ಸಿ ದಾಖಲೆ |
| ನಿ.ಪಿ.24 | ಒಳ ರೋಗಿ ದಾಖಲೆ |

ಪಾಟೀ ಸವಾಲುಃ 1 ನೇ ಎದುರುದಾರರ ಪರ ವಕೀಲರಿಂದಃ

ನ್ಯಾಯಾಲಯಕ್ಕೆ ಹಾಜರುಪಡಿಸಿದ ದಾಖಲೆಗಳ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇರುವುದಿಲ್ಲ. ಅರ್ಜಿದಾರರು ಯಾವ ಗಾಯ ಮತ್ತು ಖಾಯಿಲೆಗೆ ಚಿಕಿತ್ಸೆ ಪಡೆದಿರುತ್ತಾರೆ ಎಂದು ನನಗೆ ಹೇಳಲು ಬರುವುದಿಲ್ಲ. ನಿ.ಪಿ.23 ರಲ್ಲಿ ಅಪಘಾತವು 2 ದ್ವಿಚಕ್ರ ವಾಹನಗಳ ಮಧ್ಯೆ ಆಗಿರುತ್ತದೆ ಎಂದು ನಮೂದಿಸಿರುತ್ತದೆ ಎಂದರೆ ಸರಿ. ನಿ.ಪಿ.11 ಮತ್ತು 24 ರಲ್ಲಿ ಅಪಘಾತವು ದ್ವಿ ಚಕ್ರ ವಾಹನ ಮತ್ತು ಟ್ರಕ್ ನಡುವೆ ಆಗಿರುತ್ತದೆ ಎಂದು ನಮೂದಿಸಿರುತ್ತದೆ ಎಂದರೆ ಸರಿ. ಅಪಘಾತವು ದ್ವಿಚಕ್ರ ವಾಹನದಿಂದ ಆಗದೇ ಇದ್ದರೂ ಸಹಿತ ಮತ್ತು ಅಪಘಾತವು ಟ್ರಕ್ ವಾಹನದಿಂದ ಆಗಿದ್ದರೂ ಸಹಿತ ಅಪಘಾತವು ದ್ವಿ ಚಕ್ರ ವಾಹನಗಳ ಮಧ್ಯೆ ಆಗಿರುತ್ತದೆ ಎಂದು ಸುಳ್ಳು ದಾಖಲೆಗಳನ್ನು ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ನಮ್ಮ ಆಸ್ಪತ್ರೆಯಲ್ಲಿ ಅರ್ಜಿದಾರರು ಯಾವುದೇ ಚಿಕಿತ್ಸೆ ಪಡೆದಿಲ್ಲ ಆದರೂ ಕೂಡ ಅವರಿಗೆ ಸಹಾಯ ಮಾಡಲು ಎಲ್ಲಾ ದಾಖಲೆಗಳನ್ನು ಸೃಷ್ಟಿ ಮಾಡಿ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾ ರಣೆ ಇಲ್ಲಃ**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಇದೆ

17 ನೇ ಅಪರ ನ್ಯಾಯಾಧೀಶರು
ಮತ್ತು ಎಂಎಸಿಟಿ ಸದಸ್ಯರು